ಊ) ಈ ವೆಚ್ಚವನ್ನು ಕಡಿಮೆಗೊಳಿಸಲು ಸಾಧ್ಯವೆ ;

ಊ) ಹಾಗಿದ್ದಲ್ಲಿ, ಈ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರದವರು ಆಲೋಚಿಸಿರುವರೆ ;

ಋ) ತಾಲ್ಲೂಕು ಮಟ್ಟದಲ್ಲಿ ಸಹಾಯಕ ವಿದ್ಯಾಧಿಕಾರಿಗಳಿಗೆ ಹಾಗೂ ಇತರ ಇಲಾಖಾ ಅಧಿಕಾರಿಗಳಿಗೆ ಡೀಸೆಲ್ ಯಾ ಪೆಟ್ರೋಲ್ ಚಾಲಿತ ದ್ವಿಚಕ್ರವಾಹನವನ್ನು ನೀಡಿದ್ದಲ್ಲಿ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಸಾಧ್ಯ ಎನ್ನುವುದು ಸರಕಾರದವರ ಗಮನಕ್ಕೆ ಬಂದಿದೆಯೇ ;

ಋೂ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ ?

ಉತ್ತರ : ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).— ಮಾಹಿತಿಯನ್ನು ಸಂಗ್ರಹಿಸಲಾಗುತ್ತಿವೆ.

ವಿಷಯ : ಹೊನ್ನಾವರ ತಾಲ್ಲೂಕಿನಲ್ಲಿ ವೃದ್ಧಾಪ್ಯ ವೇತನ ಮಂಜೂರಾತಿಗಾಗಿ ಬಂದಿರುವ ಅರ್ಜಿಗಳು

ಪ್ರಶ್ನೆ : 174 (617) ಶ್ರೀ ಆರ್.ಎಸ್. ನಾಯಕ (ಹೊನ್ನಾವರ).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;—

ಅ) ಹೊನ್ನಾವರ ಮತ್ತು ಭಟ್ಕಳ ತಾಲ್ಲೂಕಿನಲ್ಲಿ 1983ನೇ ವರ್ಷಕ್ಕೆ ಒಟ್ಟಿಗೆ ಎಷ್ಟು ವೃದ್ಧಾಪ್ಯ ವೇತನದ ಅರ್ಜಿಗಳು ಬಂದಿದ್ದವು ;

ಆ) ಅವುಗಳ ಪೈಕಿ ಎಷ್ಟು ಮಂದಿಗೆ ಮಂಜೂರು ಮಾಡಲಾಗಿದೆ ಹಾಗೂ ಎಷ್ಟು ಮಂದಿಗೆ ನಿರಾಕರಿಸಲಾಗಿದೆ?

ಉತ್ತರ : ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).— ಅ) ಹೊನ್ನಾವರ ಮತ್ತು ಭಟಕಳ ತಾಲ್ಲೂಕಿನಲ್ಲಿ 1983ನೇ ಇಸವಿಯಲ್ಲಿ ಅನುಕ್ರಮವಾಗಿ 173 ಮತ್ತು 147 ವೃದ್ಧಾಪ್ಯ ವೇತನದ ಅರ್ಜಿಗಳು ಬಂದಿದ್ದವು.

ಆ) ಅವುಗಳ ಪೈಕಿ ಹೊನ್ನಾವರ ತಾಲ್ಲೂಕಿನ 62 ಅರ್ಜಿದಾರರಿಗೂ, ಭಟಕಳದಲ್ಲಿ 81 ಅರ್ಜಿದಾರರಿಗೂ ವೃದ್ಧಾಪ್ಯ ವೇತನ ಮಂಜೂರು ಮಾಡಲಾಗಿದೆ. ಮತ್ತು ಅನುಕ್ರಮವಾಗಿ 87 ಮತ್ತು 49 ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಹೊನ್ನಾವರದಲ್ಲಿ 24 ಅರ್ಜಿಗಳು ಮತ್ತು ಭಟಕಳದಲ್ಲಿ 17 ಅರ್ಜಿಗಳು ವಿಲೇವಾರಿಗಾಗಿ ಉಳಿದಿದ್ದವು,

ವಿಷಯ : ಕುಂದಾಪುರ ತಾಲ್ಲೂಕಿನ ಬಿದ್ಕಲ್‌ಕಟ್ಟೆ ಆರೋಗ್ಯ ಕೇಂದ್ರದಲ್ಲಿ ಸಿಬ್ಬಂದಿಗಳ ಕೊರತೆ ಇರುವುದು.

ಪ್ರಶ್ನೆ : 176 (268) ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).— ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :

ಅ) ಕುಂದಾಪುರ ತಾಲ್ಲೂಕಿನ ಬಿದ್ಕಲ್‌ಕಟ್ಟೆ ಆರೋಗ್ಯ ಕೇಂದ್ರಕ್ಕೆ ಅಗತ್ಯವಿರುವ ಸಿಬ್ಬಂದಿಗಳ ಸಂಖ್ಯಾ ಬಲವೆಷ್ಟು ;

ಆ) ಕೊರತೆಯಿರುವ ಸಿಬ್ಬಂದಿ ಸಂಖ್ಯಾ ಬಲವೆಷ್ಟು ;

ಇ) ಆತಿ ಶೀಘ್ರದಲ್ಲಿಯೇ ಸದರಿ ಸಿಬ್ಬಂದಿಯನ್ನು ಸರ್ಕಾರದವರು ನೇಮಕ ಮಾಡುವರೇ ?

ಉತ್ತರ : ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯಸಚಿವರು.— ಅ) 52 ಆ) 19 ಇ) ಹೌದು.

ವಿಷಯ : ಕೈಗಾರಿಕಾ ವಿವಾದದಲ್ಲಿ ಪೋಲೀಸರ ಮಧ್ಯ ಪ್ರವೇಶ

ಪ್ರಶ್ನೆ : 177 (632) ಶ್ರೀ ಪಂಪಾಪತಿ (ದಾವಣಗೆರೆ).— ಮಾನ್ಯ ಗೃಹ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಶಾಂತಿಯುತವಾದ ಕಾರ್ಮಿಕ ವಿವಾದಗಳಲ್ಲಿಯೂ ಸಹಾ ಪೋಲೀಸರು ಮಧ್ಯ ಪ್ರವೇಶಿಸಿ ಕಾರ್ಮಿಕರ ಮೇಲೆ ಲಾಠಿ, ಅಶ್ರುವಾಯು ಹಾಗೂ ಲಾಠಿ ಪ್ರಹಾರಗಳನ್ನು ಮಾಡಿ ದಬ್ಬಾಳಿಕೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಇತ್ತೀಚೆಗೆ ವಿಡಿಯಾ (ಇಂಡಿಯಾ) ಕಾರ್ಖಾನೆಯ ಕಾರ್ಮಿಕರು ಶಾಂತಿಯುತವಾಗಿ ಚಳುವಳಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದರೂ ಅವರ ಮೇಲೆ ಪೋಲೀಸರು ಅಮಾನುಷವಾಗಿ ಲಾಠಿ ಪ್ರಹಾರ ಮಾಡಿರುವುದು ಕಾರ್ಖಾನೆಯೊಳಗೆ ನುಗ್ಗಿ ಹೊಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಇ) ಹಾಗಿದ್ದಲ್ಲಿ ಕಾರ್ಮಿಕ ವಿವಾದಗಳಲ್ಲಿ ಪೋಲೀಸರು ಮಧ್ಯ ಪ್ರವೇಶಿಸದಂತೆ ತಡೆಗಟ್ಟಲು ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುವರು?

ಈ) ವಿಡಿಯಾ ಕಾರ್ಖಾನೆಯ ಕೆಲಸಗಾರರ ಮೇಲಿನ ಪೋಲಿಸರ ದಬ್ಬಾಳಿಕೆಯ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳನ್ನು ಶಿಕ್ಷಿಸಲಾಗುವುದೇ?

ಉತ್ತರ : ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).— ಅ) ಶಾಂತಿಯುತವಾದ ಕಾರ್ಮಿಕ ವಿವಾದಗಳಲ್ಲಿ ಆರಕ್ಷಕರು ಮಧ್ಯ ಪ್ರವೇಶಿಸಿ ಕಾರ್ಮಿಕರ ಮೇಲೆ ಅಶ್ರುವಾಯು ಹಾಗೂ ಲಾಠಿ ಪ್ರಹಾರಗಳನ್ನು ಮಾಡಿರುವುದಿಲ್ಲ.

ಆ) ಶಾಂತಿಯುತವಾಗಿ ಮುಷ್ಕರ ನಡೆಸುತ್ತಿರುವ ಕಾರ್ಮಿಕರ ಮೇಲೆ ಲಾಠಿ ಪ್ರಹಾರ ಮಾಡಿರುವುದಿಲ್ಲ. ಆದರೆ ದಿನಾಂಕ 29-12-1983ರಂದು ವಿಡಿಯಾ (ಇಂಡಿಯಾ)ದ ಮುಷ್ಕರ ಹೂಡಿದ ಕಾರ್ಮಿಕರು ಇತರ ಕಾರ್ಮಿಕರು ಕಾರ್ಖಾನೆಯ ಆವರಣದೊಳಕ್ಕೆ ಪ್ರವೇಶಿಸಲು ಅಡ್ಡಿಪಡಿಸಿದಾಗ ಆರಕ್ಷಕರುಗಳು ಇದನ್ನು ತಡೆಯಲು ಹೋದಾಗ ವಿಡಿಯಾ (ಇಂಡಿಯಾ) ಮತ್ತು ಸರಹದ್ದಿನ ಕೆಲವು ಮುಷ್ಕರ ಹೂಡಿದ ಕಾರ್ಮಿಕರು ಪೋಲೀಸರ ಮೇಲೆ ಕಲ್ಲನ್ನು ತೂರಿದಾಗ ಮತ್ತು ಪರಿಸ್ಥಿತಿಯು ವಿಕೋಪಕ್ಕೆ ತಲುಪಿದಾಗ ಪೋಲೀಸರು ಅಶ್ರುವಾಯು ಮತ್ತು ಲಾಠಿಯನ್ನು ಉಪಯೋಗಿಸಿದ್ದು ನಿಜವಿರುತ್ತೆ.

ಇ) ಕಾರ್ಮಿಕ ವಿವಾದಗಳಲ್ಲಿ ಪೋಲೀಸರು ಮಧ್ಯ ಪ್ರವೇಶಿಸುತ್ತಿಲ್ಲ.

ಈ) ಪೋಲೀಸರು ತಾರೀಖು 29-12-1983ರಂದು ವಿಡಿಯಾ (ಇಂಡಿಯಾ) ಕಾರ್ಮಿಕರ ಮೇಲೆ ಅಶ್ರುವಾಯು ಮತ್ತು ಲಾಠಿಯನ್ನು ಉಪಯೋಗಿಸುವ ಸಂದರ್ಭವಿದ್ದದ್ದರಿಂದ ಅವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ.

ವಿಷಯ : ಮಂತ್ರಿಗಳ ಬಾಬತ್ತು ಆದ ವೆಚ್ಚ

ಪ್ರಶ್ನೆ : 178 (626) ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) 10-1-1983 ರಿಂದ 31-12-1983ರವರೆಗೆ ಪ್ರತಿಯೊಬ್ಬ ಮಂತ್ರಿಗಳಿಗಾಗಿ ಮಾಡಿರುವ ಒಟ್ಟು ವೆಚ್ಚ ;

ಆ) ವಿವಿಧ ಲೆಖ್ಖ ಶೀರ್ಷಿಕೆಗಳ ಅಡಿಯಲ್ಲಿ ಪ್ರತಿಯೊಬ್ಬ ಮಂತ್ರಿಗಳಿಗೂ ಯಾವ ಬಗ್ಗೆ ಮತ್ತು ಎಷ್ಟು ವೆಚ್ಚ ಮಾಡಲಾಗಿದೆ ;

ಇ) ಸರಳತೆಯನ್ನು ಕಾಪಾಡಲು ಈ ವೆಚ್ಚಗಳನ್ನು ಇಳಿಸಲು ಯಾವುದೇ ಯೋಜನೆ ಇದೆಯೆ ?

ಉತ್ತರ : ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).— ಅ) ಮತ್ತು

ಆ) ಲಗತ್ತಿಸಿರುವ ತಃಖ್ತೆಯನ್ನು ನೋಡಬಹುದು.

ಇ) ಆದಷ್ಟು ಕಡಿಮೆ ಮಟ್ಟದಲ್ಲಿ ವೆಚ್ಚ ಮಾಡಲಾಗುತ್ತಿದೆ.

(ಅ) ಮತ್ತು (ಆ) ಗೆ ಸಂಬಂಧಿಸಿರುವ ತಃಖ್ತೆಯನ್ನು ಪುಟ 392 ಮತ್ತು 393ರಲ್ಲಿ ಕೊಡಲಾಗಿದೆ.